## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC/ST. No.09-2020

ದೋ.ಸಾ. 29
ಫ್ರಾ.ಸಾ. 14
ಪ್ರ.ವ.ಬೊ.ದಿನಾಂಕ. 18-06-2026

| | | |
|---|---|---|
| ಹೆಸರು | - | ಬಾಲು ಎಂ. |
| ತಂದೆ ಹೆಸರು | - | ಎಂ.ಮಹಾದೇವ್ |
| ವಯಸ್ಸು | - | 44 ವರ್ಷ |
| ಉದ್ಯೋಗ | - | ವೈಜ್ಞಾನಿಕ ಅಧಿಕಾರಿ, ಎಫ್ ಎಸ್ ಎಲ್ ಬೆಂಗಳೂರು |
| ವಾಸ ಸ್ಥಳ | - | ಬೆಂಗಳೂರು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು 2014 ರಿಂದ ಇವತ್ತಿನವರೆಗೂ ವೈಜ್ಞಾನಿಕ ಅಧಿಕಾರಿಯೆಂದು ಎಫ್ ಎಸ್ ಎಲ್ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಕಂಪ್ಯೂಟರ್ ಸೈನ್ಸ್ ನಲ್ಲಿ ಎಂಎಸ್ಸಿ ಮುಗಿಸಿದ್ದೇನೆ ಹಾಗೂ ಡಿಪ್ಲೋಮೋ ಸಿನಿಮೇಟೋಗ್ರಾಫಿಯಲ್ಲಿ ಮುಗಿಸಿದ್ದೇನೆ.

2. ಕ್ರೈಂ ನಂ.143/2019 ದಾವಣಗೆರೆಯ ವಿದ್ಯಾನಗರ ಪೊಲೀಸ್ ಠಾಣೆಗೆ ಸಂಬಂಧಪಟ್ಟ ಪ್ರಕರಣದಲ್ಲಿ ನಮಗೆ 02-12-2019 ಕ್ಕೆ ಒಂದು ಸೀಲ್ ಆದ ಮೊಬೈಲ್ ಫೋನ್ ಬಂದಿತ್ತು. ಅದನ್ನು ಚಾ.ಸಾ.22 ರವರ ಮುಖಾಂತರ ಎಫ್ ಎಸ್ ಎಲ್ ಗೆ ಕಳುಹಿಸಿದ್ದರು. ನನಗೆ 18-01-2021 ಕ್ಕೆ ನನಗೆ ಪರಿಶೀಲನೆಗೆ ಬಂದಿತ್ತು. ಸಾಕ್ಷಿಯು ನಾನು ಕೊಟ್ಟ ರಿಪೋರ್ಟ 21-01-2020 ಎಂದು ಕಾಣಿಸಿದ್ದು, ಅದು 21-01-2021 ಆಗಿರುತ್ತದೆ ಎನ್ನುತ್ತಾರೆ.

3. ನಾನು ಸೀಲ್ ಆದ ಕವರ್ ಮತ್ತು ಮಾದರಿ ಮೊಹರು ತಾಳೆಯಾಗುವ ಬಗ್ಗೆ ಪರಿಶೀಲನೆ ಮಾಡಿ ಖಚಿತಪಡಿಸಿಕೊಂಡು ಸದರಿ ಕವರನ್ನು ಓಪನ್ ಮಾಡಿದೆನು.

4. ಸದರಿ ಕವರಿನಲ್ಲಿ ಒಂದು ಸ್ಯಾಮ್ ಸಂಗ್ ಮೊಬೈಲ್ ಫೋನ್ ಇತ್ತು. ಅದರ ಮಾಡಲ್ ನಂ.ಎಸ್ ಎಂ ಜಿ 975 ಎಫ್/ಡಿಎಸ್ ಇತ್ತು. ಅದರಲ್ಲಿ ಒಂದು ಒಡಾಫೋನಿನ ಸಿಮ್ ಕಾರ್ಡ್ ಇತ್ತು. ನಾನು ಸದರಿ ಫೋನ್ ಹಾಗೂ ಸಿಮ್ ಕಾರ್ಡನ್ನು ತೋರಿಸಿದರೆ ಗುರುತು ಹಿಡಿಯುತ್ತೇನೆ.

5. ನಾನು ಅದನ್ನು ವೈಜ್ಞಾನಿಕ ವಿಧಿ ಮೂಲಕ ವಿಶ್ಲೇಷಣೆ ಮಾಡಿ ತನಿಖಾಧಿಕಾರಿಗಳು ಕೇಳಿದ ಪ್ರಶ್ನೆಗೆ ಈ ಕೆಳಗಿನಂತೆ ಉತ್ತರ ನೀಡಿರುತ್ತೇನೆ.

i) ದಿಃ 12-11-2019 ಕ್ಕೆ ರಾತ್ರಿ 8-30 ಗೆ ಕಾಲ್ ಹೋದ ಬಗ್ಗೆ ಒಂದು ದಾಖಲೆ ಇದ್ದು, ಅದರ ಹಾರ್ಡ್ ಕಾಪಿಯನ್ನು ಹಾಜರುಮಾಡಿರುತ್ತೇನೆ. ಸದರಿ ಹಾರ್ಡ್ ಕಾಪಿ ನಾಲ್ಕು ಪುಟ ಇದ್ದು, ಅದನ್ನು ಒಟ್ಟಾರೆ ನಿ.ಪಿ.50 ಎಂದು ಗುರುತಿಸಲಾಯಿತು. ಸದರಿ ನಿ.ಪಿ.50 ರಲ್ಲಿ ಪ್ರಶ್ನಿತ ಮೊಬೈಲ್ ಫೋನಿನ ನಾಲ್ಕು ಫೋನ್ ನಂಬರ್ ಗಳು ಹಾಗೂ ನಾಲ್ಕು ಕಾಲ್ ಲಾಗ್ಸ್ ಗಳು ಇದ್ದು, ಅವುಗಳನ್ನು ಕಾಣಿಸಿರುತ್ತೇನೆ.

6. ಅದರ ತನಿಖೆ ಮುಗಿದ ಕಾರಣ ಅದನ್ನು ಸೀಲ್ ಮಾಡಿ ಸ್ಯಾಂಪಲ್ ಸೀಲ್ ನೊಂದಿಗೆ ತನಿಖಾಧಿಕಾರಿಗೆ ನನ್ನ ಅಭಿಪ್ರಾಯದೊಂದಿಗೆ ವಾಪಾಸ್ ಕಳುಹಿಸಿರುತ್ತೇನೆ. ಈಗ ವಿಸಿ ಮುಖಾಂತರ ತೋರಿಸಿದ ತನಿಖೆ ವರದಿ ನಾನೇ ನೀಡಿದ್ದು, ಅದನ್ನು ನಿ.ಪಿ.51 ಎಂದು, ಅದಕ್ಕೆ ನಾನು ಸಹಿ ಮಾಡಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.51(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಕೆಎನ್ ಉಮಾ ವಕೀಲರಿಂದ.**

7. ನಾನು ಕೊಟ್ಟ ತನಿಖಾ ವರದಿ ನಿ.ಪಿ.51 ರಲ್ಲಿ " further the alleged call recording with respect to above mentioned mobile number and period is not present in Samsung mobile phone marked as D1a" ಇದೆ ಎಂದರೆ ನಿಜ. ಅದೇ ರೀತಿ " the vodafone SIM card marked as D1b does not contain the call logs and call recording files " ಎಂದು ಇದೆ ಎಂದರೆ ನಿಜ. ನಾನು ಕೊಟ್ಟ ನಿ.ಪಿ.50 ರಲ್ಲಿ ನಾಲ್ಕನೇ ಪೇಜಿನಲ್ಲಿ ಫೋನ್ ನಂ.9448053663 ನಂಬರ್ ಗೆ ಅನುಕ್ರಮ 2 ರಿಂದ 4 ಕಾಲ್ ಗಳು ಔಟ್ ಗೋಯಿಂಗ್ ಕಾಲ್ ಗಳಾಗಿವೆ ಎಂಬುದು ನಿಜ.

8. ನಾನು ತನಿಖಾಧಿಕಾರಿಯ ಹೇಳಿಕೆಯ ಮೇರೆಗೆ ಸುಳ್ಳು ರಿಪೋರ್ಟ್ ಕೊಟ್ಟಿದ್ದೇನೆ ಎನ್ನುವುದು ಸುಳ್ಳು.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.